ಸೃಜನಿ

SRUJANI: Indian Journal of Innovative Research and Development (SIJIRD)
Volume-4 Special Issue 1, March-April 2025, Pp. 56-60
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಬೆಳಗಾವಿ ಜಿಲ್ಲೆಯ ನೈಸರ್ಗಿಕ ವಿಕೋಪಗಳು ಮತ್ತು ಪರಿಸರ : ಒಂದು ಅವಲೋಕನ

**ನಂದೀಶ್ ಆರ್.ಎನ್[1] ಮತ್ತು ಡಾ.ಎಸ್.ನಾಗರತ್ನಮ್ಮ[2]**

[1]ಸಂಶೋಧನಾ ವಿದ್ಯಾರ್ಥಿ, ಇತಿಹಾಸ ವಿಭಾಗ, ಜ್ಞಾನಭಾರತಿ ಆವರಣ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

[2]ಹಿರಿಯ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಜ್ಞಾನಭಾರತಿ ಆವರಣ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

***Abstract:***

*ಭಾರತ ಹಾಗೂ ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಪ್ರತಿ ವರ್ಷವೂ ಸಾಮಾನ್ಯವಾಗಿ ನೈಸರ್ಗಿಕ ವಿಕೋಪಗಳು ಸಂಭವಿಸುತ್ತಿವೆ. ಆದರಿಂದ ಪರಿಸರದ ಮೇಲೆ ಹಾಗೂ ಮಾನವ ಸಮಾಜದ ಮೇಲೆ ದುಷ್ಪರಿಣಾಮ ಬೀರುತ್ತಿರುವುದನ್ನು ಕಾಣಬಹುದು. ಭಾರತದಲ್ಲಿ ಪರಿಸರ ಸಂರಕ್ಷಣೆಯು ಅತ್ಯಂತ ಮುಖ್ಯವಾದ ಅಂಶವಾಗಿದ್ದು, ಅದು ಜನರ ಸಾಮಾಜಿಕ, ಆರ್ಥಿಕ, ಧಾರ್ಮಿಕ ಹಾಗೂ ರಾಜಕೀಯ ವಿಚಾರಗಳ ಮೇಲೆ ವ್ಯತಿರಿಕ್ತ ಪರಿಣಾಮವನ್ನುಂಟು ಮಾಡುತ್ತದೆ. ಬೆಳಗಾವಿ ಜಿಲ್ಲೆಯು ಮಹಾರಾಷ್ಟ್ರದ ಗಡಿಭಾಗದಲ್ಲಿದ್ದು ಅದು ಪ್ರತಿ ವರ್ಷವೂ ನದಿ ಪ್ರವಾಹದಿಂದ ಕೃಷಿ ಸಂಪತ್ತು, ಸಾಮಾನ್ಯ ಜನರ ಆಸ್ತಿ–ಪಾಸ್ತಿಗಳ ನಷ್ಟ ಹಾಗೂ ಭೌಗೋಳಿಕ ಸಂಪತ್ತು ವಿನಾಶವಾಗುತ್ತಿರುವುದರಿಂದ ಅಲ್ಲಿನ ಪರಿಸರದ ಮೇಲೆ ಅಡ್ಡ ಪರಿಣಾಮ ಬೀರುತ್ತಿರುವುದನ್ನು ಕಾಣಬಹುದು. ಪ್ರಸ್ತುತ ಈ ಲೇಖನದಲ್ಲಿ ಬೆಳಗಾವಿ ಜಿಲ್ಲೆಯ ನೈಸರ್ಗಿಕ ವಿಕೋಪಗಳಿಂದ ಪರಿಸರದ ಮೇಲೆ ಉಂಟಾಗುವ ಪರಿಣಾಮವನ್ನು ವಿಶ್ಲೇಷಿಸಲಾಗಿದೆ.*

***Keywords:*** *ನೈಸರ್ಗಿಕ ವಿಕೋಪಗಳು, ಪರಿಸರ, ನದಿ, ಪ್ರವಾಹ.*

### ಪೀಠಿಕೆ

ನೈಸರ್ಗಿಕ ವಿಕೋಪವು ಸಮಾಜಕ್ಕೆ ಹಾನಿಯನ್ನುಂಟು ಮಾಡುವ ಅನಿರೀಕ್ಷಿತ ಘಟನೆಯಾಗಿದೆ. ಪರಿಸರ ಮತ್ತು ಅದರಲ್ಲಿ ವಾಸಿಸುವ ಜನರಿಗೆ ಹಾನಿ ಮಾಡುವ ಅನೇಕ ನೈಸರ್ಗಿಕ ವಿಕೋಪಗಳಿವೆ. ಅವುಗಳಲ್ಲಿ ಕೆಲವು ಭೂಕಂಪಗಳು, ಚಂಡ ಮಾರುತಗಳು, ಪ್ರವಾಹಗಳು, ಸುನಾಮಿಗಳು, ಭೂಕುಸಿತಗಳು, ಜ್ವಾಲಾಮುಖಿ ಸ್ಫೋಟಗಳು ಮತ್ತು ಹಿಮಕುಸಿತಗಳು. ನೈಸರ್ಗಿಕ ವಿಕೋಪಗಳು ಪ್ರಾದೇಶಿಕ ವ್ಯಾಪ್ತಿಯ ದುರಂತದ ಮಟ್ಟ ಅಥವಾ ತೀವ್ರತೆಯನ್ನು ಅಳೆಯುತ್ತದೆ. ಪ್ರಸ್ತುತ ಅಧ್ಯಯನಕ್ಕೆ ಮಾಧ್ಯಮಿಕ ಮೂಲಗಳಿಂದ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಮಾಧ್ಯಮಿಕ ಮೂಲಗಳಾದ ದಿನಪತ್ರಿಕೆಗಳು, ಸಂಶೋಧನಾ ಲೇಖನಗಳು, ಸರ್ಕಾರದ ವರದಿಗಳು ಹಾಗೂ ಸಂಶೋಧನಾ ನಿಯತಕಾಲಿಕೆಗಳು ಮುಂತಾದ ಮೂಲಗಳಿಂದ ಸಂಗ್ರಹಿಸಿದ ಮಾಹಿತಿಯನ್ನು ಈ ಲೇಖನದಲ್ಲಿ ವಿಶ್ಲೇಷಿಸಲಾಗಿದೆ.

***Please cite this article as:*** ನಂದೀಶ್, ಆರ್.ಎನ್ ಮತ್ತು ಎಸ್. ನಾಗರತ್ನಮ್ಮ. (2025). ಬೆಳಗಾವಿ ಜಿಲ್ಲೆಯ ನೈಸರ್ಗಿಕ ವಿಕೋಪಗಳು ಮತ್ತು ಪರಿಸರ: ಒಂದು ಅವಲೋಕನ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 4(1), 56–60

ಭಾರತ ಮತ್ತು ಇತರೆ ದೇಶಗಳಲ್ಲಿ ಸಂಭವಿಸಿದ ನೈಸರ್ಗಿಕ ವಿಪತ್ತುಗಳನ್ನು ಹಾನಿಯ ತೀವ್ರತೆ ಅಥವಾ ಮಟ್ಟವನ್ನು ಮೂರು ವರ್ಗಗಳಾಗಿ ವಿಂಗಡಿಸಬಹುದು. ***ಸಣ್ಣ ಪ್ರಮಾಣದ ವಿಪತ್ತುಗಳು*** : ಈ ವಿಪತ್ತುಗಳು 50 ಕಿ.ಮೀ ಗಳಿಂದ 100 ಕಿ.ಮೀ ಗಳವರೆಗೆ ವಿಸ್ತರಿಸುತ್ತಿವೆ. ಹಾಗಾಗಿ ಈ ರೀತಿಯ ಅನಾಹುತಗಳು ಹೆಚ್ಚಿನ ಪ್ರಮಾಣದ ಹಾನಿಯನ್ನುಂಟು ಮಾಡುವುದಿಲ್ಲ. ***ಮಧ್ಯಮ ಪ್ರಮಾಣದ ವಿಪತ್ತುಗಳು*** : ಈ ವಿಪತ್ತುಗಳು 100 ಕಿ.ಮೀಗಳಿಂದ 500 ಕಿ.ಮೀ ಗಳವರೆಗೆ ವಿಸ್ತರಿಸುತ್ತವೆ. ಇವು ಸಣ್ಣ ಪ್ರಮಾಣದ ಅನಾಹುತಕ್ಕಿಂತ ಹೆಚ್ಚಿನ ಪ್ರಮಾಣದ ಹಾನಿಯನ್ನುಂಟು ಮಾಡುತ್ತವೆ. ***ದೊಡ್ಡ ಪ್ರಮಾಣದ ವಿಪತ್ತುಗಳು :*** ಈ ವಿಪತ್ತುಗಳು 1000 ಕಿ.ಮೀ ಗಳಿಗಿಂತಲೂ ಹೆಚ್ಚಿನ ಪ್ರದೇಶದಲ್ಲಿ ಹಾನಿಯನ್ನುಂಟು ಮಾಡಬಹುದು. ಈ ವಿಪತ್ತುಗಳಿಂದ ಪರಿಸರದ ಮೇಲೆ ಹೆಚ್ಚಿನ ಪ್ರಮಾಣದ ಹಾನಿ ಉಂಟಾಗುತ್ತದೆ. ಡೈನೋಸಾರ್‌ಗಳ ನಾಶವು ದೊಡ್ಡ ಪ್ರಮಾಣದ ನೈಸರ್ಗಿಕ ವಿಕೋಪಗಳಿಂದ ಉಂಟಾಗಿದೆ.

ಕೃಷ್ಣಾನದಿಯುಮಹಾರಾಷ್ಟ್ರದ ಮಹಾಬಲೇಶ್ವರದಲ್ಲಿ ಉಗಮಿಸಿ ಮಹಾರಾಷ್ಟ್ರ, ಕರ್ನಾಟಕ, ತೆಲಂಗಾಣ, ಆಂಧ್ರಪ್ರದೇಶದಲ್ಲಿ 1400 ಕಿ.ಮೀ ಹರಿಯುತ್ತದೆ. ಮಹಾರಾಷ್ಟ್ರದ ಕೃಷ್ಣಾನದಿ ಜಲಾನಯನ ಪ್ರದೇಶದಲ್ಲಿ ಹೆಚ್ಚಾಗಿ ಮಳೆಯಾದಾಗ ಕೃಷ್ಣಾನದಿಯು ಉಕ್ಕಿಹರಿದು ಎಲ್ಲಾ ಅಣೆಕಟ್ಟುಗಳು ತುಂಬಿ ಪ್ರವಾಹ ಸೃಷ್ಟಿಸುತ್ತಿವೆ. ಬೆಳಗಾವಿ ಜಿಲ್ಲೆಯಲ್ಲಿಯೂ ಸಹ ಕೃಷ್ಣಾ ಮತ್ತು ಅದರ ಉಪನದಿಗಳಾದ ದೂದ್ ಗಂಗಾ, ವೇದಗಂಗಾ, ಘಟಪ್ರಭಾ, ಮಲಪ್ರಭಾ, ಹಿರಣ್ಯಕೇಶಿ, ಮಾರ್ಕಂಡೇಯ ನದಿಗಳು ಪ್ರತಿವರ್ಷ ಮಳೆಗಾಲದಲ್ಲಿ ಉಕ್ಕಿ ಹರಿದು ಬೆಳಗಾವಿ ಜಿಲ್ಲೆಯ ನದಿ ಪಾತ್ರದಲ್ಲಿ ಪ್ರವಾಹಗಳು ಉಂಟಾಗಿ ಅನೇಕ ಅನಾಹುತಗಳನ್ನು ಸೃಷ್ಟಿಸುತ್ತಿವೆ. ನೀರಿನಲ್ಲಿ ಬೆಳೆಗಳು, ಮನೆಗಳು, ಗ್ರಾಮಗಳೇ ಮುಳುಗಡೆ ಆಗುತ್ತವೆ. ಹಲವು ಪ್ರಾಣಿ–ಪಕ್ಷಿಗಳು ತಮ್ಮ ಪ್ರಾಣವನ್ನು ಕಳೆದು ಕೊಳ್ಳುವ ಪರಿಸ್ಥಿತಿಯು ಪ್ರವಾಹದಿಂದ ಉಂಟಾಗುತ್ತದೆ. ವಿವಿಧ ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ ಸೇತುವೆಗಳು, ರಸ್ತೆಗಳು ಸಹ ಮುಳುಗಡೆಯಾಗಿ ಕೊಚ್ಚಿಹೋಗುತ್ತಿವೆ.

**ನೈಸರ್ಗಿಕ ವಿಪತ್ತುಗಳಿಂದ ಪರಿಸರದ ಮೇಲಾಗುವ ಪರಿಣಾಮ**

ನೈಸರ್ಗಿಕ ವಿಪತ್ತುಗಳು ಆಕಸ್ಮಿಕವಲ್ಲ ಮತ್ತು ಆಕಸ್ಮಿಕವಾಗಿ ಸಂಭವಿಸುವುದಿಲ್ಲ. ವಿಪತ್ತುಗಳ ಅಪಾಯಗಳು ಮತ್ತು ದುರ್ಬಲ ಪರಿಸ್ಥಿತಿಗಳ ಹಾಗೂ ವಿಪತ್ತುಗಳು ಮೂಲ ಸಾಮಾಜಿಕತೆಯನ್ನು ಮಾತ್ರ ಬಹಿರಂಗಪಡಿಸುವುದಿಲ್ಲ. ನೈಸರ್ಗಿಕ ವಿಪತ್ತುಗಳಿಂದ ಆರ್ಥಿಕ, ಸಾಮಾಜಿಕ, ರಾಜಕೀಯ, ಶೈಕ್ಷಣಿಕ ಪ್ರಗತಿಯ ಮೇಲೆ ಕೆಟ್ಟ ಪರಿಣಾಮವನ್ನು ಬೀರುತ್ತವೆ.[1]

ಬೆಳಗಾವಿ ಜಿಲ್ಲೆಯೂ ಸಹ ಬರ, ಪ್ರವಾಹ, ಚಂಡ ಮಾರುತಗಳು, ಸಾಂಕ್ರಾಮಿಕ ರೋಗಗಳಂತಹ ದಾಳಿಗಳಿಂದ ವಿವಿಧ ನೈಸರ್ಗಿಕ ಹಾಗೂ ಮಾನವ ನಿರ್ಮಿತ ವಿಕೋಪಗಳಿಂದ ನಷ್ಟ ಹಾಗೂ ಹಾನಿಗಳನ್ನು ಅನುಭವಿಸುತ್ತಿದೆ. ಈ ನೈಸರ್ಗಿಕ ವಿಪತ್ತುಗಳ ಅಪಾಯದಿಂದ ಬೆಳಗಾವಿ ಜಿಲ್ಲೆಯ ಪರಿಸರದ ಮೇಲೆ ಉಂಟಾಗುವ ಅಪಾಯದ ಪ್ರಮಾಣವು ಪ್ರತಿ ವರ್ಷವೂ ಹೆಚ್ಚಾಗುತ್ತಿದೆ.

ನೈಸರ್ಗಿಕ ವಿಪತ್ತುಗಳಿಂದ ಅರಣ್ಯನಾಶ, ಅರಣ್ಯ ನಿರ್ವಹಣೆಯ ಅಭ್ಯಾಸಗಳು, ಕೃಷಿ ವ್ಯವಸ್ಥೆ ಇತ್ಯಾದಿಗಳ ಮೇಲೆ ಋಣಾತ್ಮಕವಾದ ಪರಿಣಾಮವನ್ನುಂಟು ಮಾಡುತ್ತದೆ. ಚಂಡ ಮಾರುತ, ಅಥವಾ ಸೈಕ್ಲೋನ್, ಭೂಕುಸಿತ, ಪ್ರವಾಹಗಳು ಭೂಮಿ ಮತ್ತು ನೀರಿನ ಮಾಲಿನ್ಯವನ್ನುಉಂಟು ಮಾಡುತ್ತವೆ.[2]

---

[1] https://nidm.gov.in/easindia2014/err/pdf/themes issue/env/disaster_environment.pdf
[2] https://nidm.gov.in/easindia2014/err/pdf/themes issue/env/disaster_environment.pdf

**ಬೆಳಗಾವಿ ಜಿಲ್ಲೆಯ ಪರಿಚಯ**

ಬೆಳಗಾವಿಯ ನಗರವನ್ನು 12ನೇ ಶತಮಾನದಲ್ಲಿ ರಟ್ಟರ ರಾಜವಂಶಸ್ಥರ ಆಳ್ವಿಕೆಯಿಂದ ಸ್ಥಾಪಿಸಲ್ಪಟ್ಟಿತು. ಭಾರತ 1947ರಲ್ಲಿ ಸ್ವಾತಂತ್ರ್ಯ ಗಳಿಸಿದ ನಂತರ ಬಾಂಬೆ ಸರ್ಕಾರದಿಂದ ಪ್ರತ್ಯೇಕವಾಯಿತು. 1956ರಲ್ಲಿ ಭಾಷಾವಾರು ಜಿಲ್ಲೆಗಳಾಗಿ ವಿಂಗಡಿಸಲಾಯಿತು. ಬೆಳಗಾವಿ ಜಿಲ್ಲೆಯು ಕರ್ನಾಟಕದ ಸಕ್ಕರೆ ನಾಡಾಗಿ ಪ್ರಸಿದ್ಧವಾಗಿದೆ. ಜಿಲ್ಲೆಯಲ್ಲಿ 1.5 ಲಕ್ಷ ಹೆಕ್ಟೇರ್‌ನಷ್ಟು ಭೂಮಿಯು ವಾಣಿಜ್ಯ ಬೆಳೆಗಳಿಂದ ಕೂಡಿದೆ. ಉತ್ತರ ಕರ್ನಾಟಕದ ಆಡಳಿತ ಜಿಲ್ಲೆಯಾಗಿ ಬೆಳಗಾವಿಯನ್ನು ಗುರುತಿಸಬಹುದು. 2006ರ ಸರ್ಕಾರದ ನಿರ್ಣಯದಂತೆ ಬೆಳಗಾವಿ ಜಿಲ್ಲೆಯು ಕರ್ನಾಟಕ ಎರಡನೇ ರಾಜಧಾನಿಯಾಗಿ, ಪ್ರತಿವರ್ಷ ಅಧಿವೇಶನಗಳನ್ನು ನಡೆಸಲು ತೀರ್ಮಾನಿಸಲಾಯಿತು.

ಕರ್ನಾಟಕ ರಾಜ್ಯದಲ್ಲಿ ಬೆಳಗಾವಿ ಜಿಲ್ಲೆಗೆ ವಿಶಿಷ್ಟ ಸ್ಥಾನವಿದೆ. ಬೆಳಗಾವಿಯ ಮೂಲ ಹೆಸರು ವೇಣುಗ್ರಾಮ ಕಾಲಾಂತರದಲ್ಲಿ ಇದು ಬೇಳುಗ್ರಾಮ, ಬೇಳುಗಾವಿ ಆಗಿ ಇಂದಿನ ಬೆಳಗಾವಿ ಆಯಿತು. ಕದಂಬರು, ರಟ್ಟರು, ಯಾದವರು, ವಿಜಯನಗರದ ಅರಸರು, ಬಹುಮನಿಯರು, ಬಿಜಾಪುರದ ಆದಿಲ್ ಷಾಹಿಗಳು, ಮೊಘಲರು, ಸವಣೂರು ನವಾಬರು, ಕೊಲ್ಲಾಪುರ ಮರಾಠರು ಮತ್ತು ಬ್ರಿಟಿಷರು ಹೀಗೆ ಬೆಳಗಾವಿಯ ಅನೇಕ ಸಾಮ್ರಾಜ್ಯಗಳ ಆಡಳಿತಕ್ಕೆ ಒಳಪಟ್ಟ ಜಿಲ್ಲೆಯಾಗಿದೆ. ಕಿತ್ತೂರು ರಾಣಿ ಚೆನ್ನಮ್ಮ ಮತ್ತು ಬೆಳವಡಿ ಮಲ್ಲಮ್ಮ ಅವರುಗಳ ಹೋರಾಟದ ಕಿಚ್ಚು ಈ ಜಿಲ್ಲೆಯಲ್ಲಿರುವುದು ಬಹಳ ವಿಶೇಷ. ಬೆಳಾಗಾವಿ ಜಿಲ್ಲೆಯು ಪಶ್ಚಿಮ ಘಟ್ಟದ ಮಡಿಲಿನಲ್ಲಿರುವ ಈ ನಗರವು, ಹತ್ತಿ ಹಾಗೂ ರೇಷ್ಮೆ ನೇಕಾರರ ಪ್ರದೇಶಗಳಿಂದ ಕೂಡಿದ್ದು, ಇಂದಿನ ಆಧುನಿಕ ವಿನ್ಯಾಸದ ಕಟ್ಟಡಗಳು ಹಾಗೂ ಮರಗಿಡಗಳು, ಬ್ರಿಟಿಷ್ ಕಾಲದ ದಂಡು ಪ್ರದೇಶ ಇವುಗಳನ್ನು ಒಳಗೊಂಡಿದೆ. ಬೆಳಗಾವಿಯ ಕೋಟೆ, ದೇವಾಲಯಗಳು ಹಾಗೂ ಚರ್ಚ್‌ಗಳು ಇಲ್ಲಿನ ಪ್ರಮುಖ ಪ್ರೇಕ್ಷಣೀಯ ಸ್ಥಳಗಳಾಗಿವೆ.[3]

ನಗರದ ಪರಂಪರೆಯ ತಾಣಗಳು ಹೊಸ ಅನ್ವೇಷಣೆಗಳಿಗೆ ಅವಕಾಶದ ಹಾದಿಯನ್ನು ತೆರೆದಿವೆ. ಬೆಳಗಾವಿ ನಗರವು ಕರ್ನಾಟಕ, ಮಹಾರಾಷ್ಟ್ರ ಹಾಗೂ ಗೋವಾ ರಾಜ್ಯಗಳ 2ನೇ ಶತಮಾನದ ಪ್ರಾಚೀನತೆಯ ಸಂಸ್ಕೃತಿಗಳಿಂದಾಗಿ ಹಾಗೂ ಮಹಾರಾಷ್ಟ್ರ ಹಾಗೂ ಗೋವಾ ರಾಜ್ಯಗಳ ಸಾಮೀಪ್ಯತೆಯಿಂದಾಗಿ ಆ ರಾಜ್ಯಗಳ ಸಂಸ್ಕೃತಿಗಳೊಂದಿಗೆ ಸ್ಥಳೀಯ ಕನ್ನಡ ಸಂಸ್ಕೃತಿಯೂ ಸೇರಿ ಸಮ್ಮಿಳಿತಗೊಂಡು ಶ್ರೀಮಂತ ಸಾಂಸ್ಕೃತಿಕ ನಗರವಾಗಿ ಹೊರಹೊಮ್ಮಿದೆ. ಅಲ್ಲದೆ ಭೌಗೋಳಿಕವಾಗಿ ನಗರವು ಮಲೆನಾಡು ಪ್ರದೇಶದಲ್ಲಿದ್ದು ವರ್ಷ ಪೂರ್ತಿ ಹಚ್ಚಹಸುರಿನಿಂದ ಕಂಗೊಳಿಸುತ್ತದೆ. ಶತಮಾನಗಳ ಕಾಲಾನಂತರ ಬೆಳಗಾವಿಯು ಇಂದು ಮಹತ್ವ ಪೂರ್ಣವಾದ ಹಾಗೂ ಪರಿಗಣಿಸುವಂತಹ ಕರ್ನಾಟಕ ರಾಜ್ಯದ ಪ್ರಮುಖ ಜಿಲ್ಲೆಯಾಗಿ ರೂಪಗೊಂಡಿದೆ. ಬೆಳಗಾವಿಯು ಇಂದು ವೇಗವಾಗಿ ಬೆಳವಣಿಗೆ ಹೊಂದುತ್ತಿರುವ ನಗರವಾಗಿದೆ. 2011ರ ಜನಗಣತಿಯ ಪ್ರಕಾರ ಬೆಳಗಾವಿ ಜಿಲ್ಲೆಯಲ್ಲಿ 47,79,661 ಜನಸಂಖ್ಯೆಯನ್ನು ಹೊಂದಿದೆ. 2011ರ ಜನಗಣತಿಯ ಪ್ರಕಾರ ಬೆಳಗಾವಿ ಜಿಲ್ಲೆಯಲ್ಲಿ 3 ಉಪ ವಿಭಾಗಗಳು, 10 ತಾಲೂಕುಗಳು, 35 ಹೋಬಳಿಗಳಿಂದ ಕೂಡಿದೆ. ಈ ಜಿಲ್ಲೆಯಲ್ಲಿ ಒಟ್ಟು 505 ಗ್ರಾಮ ಪಂಚಾಯಿತಿಗಳು, 2 ನಗರಸಭೆಗಳು, ಒಂದು ಮಹಾನಗರ ಪಾಲಿಕೆಯಿಂದ ಒಟ್ಟು 1275 ಗ್ರಾಮಗಳನ್ನು ಹೊಂದಿವೆ.

**ಬೆಳಗಾವಿ ಜಿಲ್ಲೆಯ ನೈಸರ್ಗಿಕ ವಿಪತ್ತುಗಳು ಮತ್ತು ಪರಿಸರ**

ಮಹಾರಾಷ್ಟ್ರದಲ್ಲಿ 2019ರ ಜೂನ್ ಮತ್ತು ಜುಲೈ ತಿಂಗಳಿನಲ್ಲಿ ಸುರಿದ ಭಾರಿಮಳೆಗೆ ಅಲ್ಲಿನ ಕೊಯ್ನಾ

[3] https://belagavi.nic.in/en/

ಜಲಾಶಯದಿಂದ ಭಾರಿ ಪ್ರಮಾಣದಲ್ಲಿ ನೀರು ಬಿಡುಗಡೆ ಮಾಡಲಾಗಿತ್ತು. ಬೆಳಗಾವಿ ಜಿಲ್ಲೆಯಲ್ಲು ಸಹ ಮಳೆಯಾಗುತ್ತಿದ್ದ ಪರಿಣಾಮ ಕೃಷ್ಣಾನದಿ, ವೇದ ಗಂಗಾನದಿ, ದೂದ ಗಂಗಾನದಿ, ಮಲಪ್ರಭಾನದಿ, ಘಟಪ್ರಭಾನದಿಗಳು ಸೇರಿದಂತೆ ಏಳು ನದಿಗಳು ಅಪಾಯದ ಮಟ್ಟ ಮೀರಿ ಪ್ರವಾಹಕ್ಕೆ ಕಾರಣವಾಯಿತು. ಇದರಿಂದ ಜಿಲ್ಲೆಯಲ್ಲಿ 24 ಜನ ಹಾಗೂ 509 ಜಾನುವಾರುಗಳ ಜೀವ ಹಾನಿಯಾಗಿರುವುದು ದಾಖಲಾಗಿದೆ. ಬೆಳಗಾವಿ ಜಿಲ್ಲೆಯ 14 ತಾಲೂಕಿನ 377 ಬಾಧಿತ ಗ್ರಾಮಗಳೆಂದು ಗುರುತಿಸಲಾಗಿದೆ. 95,336 ಕುಟುಂಬಗಳ ಸ್ಥಳಾಂತರ ಮಾಡಲಾಗಿದ್ದು, 1,10,868 ಜಾನುವಾರುಗಳನ್ನು ಹಾಗೂ 4,15,293 ಜನರನ್ನು ರಕ್ಷಣೆ ಮಾಡಲಾಗಿದೆ. ಪ್ರಾಥಮಿಕ ಅಂದಾಜಿನಂತೆ 42,290 ಬಾಧಿತಗೊಂಡು ಮನೆಗಳು ಕುಸಿದಿವೆ. ಜಿಲ್ಲಾಡಳಿತದಿಂದ 493 ನಿರಾಶ್ರಿತರ ಪರಿಹಾರ ಕೇಂದ್ರಗಳನ್ನು ತೆರೆದು 1,72,730 ಸಂತ್ರಸ್ತರಿಗೆ ಆಶ್ರಯ ನೀಡಲಾಯಿತು. ಈ ಪ್ರವಾಹದಿಂದಾಗಿ ಪರಿಸರ ಹಾನಿ, ಆಸ್ತಿ–ಪಾಸ್ತಿ ಹಾನಿ, ಕಟ್ಟಡಗಳ ಕುಸಿತ, ರಸ್ತೆಗಳ ಹಾನಿ, ಸಾವಿರಾರು ಹೆಕ್ಟರ್‌ನಷ್ಟು ಕೃಷಿಭೂಮಿ ಮತ್ತು ಬೆಳೆನಾಶವಾಗಿದೆ. ಪ್ರಾಥಮಿಕ ಅಂದಾಜಿನ ಪ್ರಕಾರ ಅತೀವೃಷ್ಟಿಯಿಂದ ಉಂಟಾದ ಸಾರ್ವಜನಿಕ ಆಸ್ತಿಗಳ ಹಾನಿಯನ್ನು 2,60,364.00 ರಷ್ಟು ಎಂದು ಅಂದಾಜಿಸಲಾಗಿದೆ. ಪ್ರವಾಹದ ಅಪಾಯದಲ್ಲಿ ಸಿಲುಕಿದವರನ್ನು ಸುರಕ್ಷಿತ ಪ್ರದೇಶಗಳಿಗೆ ಕರೆತರಲು 11 ಆರ್ಮಿತಂಡ, 9 ಎಸ್‌ಡಿಆರ್‌ಎಫ್ ತಂಡ, 7 ಎನ್‌ಡಿಆರ್‌ಎಫ್, 63 ಅಗ್ನಿಶಾಮಕ ದಳ ತಂಡ, 1250 ಸಿವಿಲ್ ಪೋಲಿಸ್ ಸಿಬ್ಬಂದಿಗಳು, 500 ಗೃಹರಕ್ಷಕ ದಳದ ಸಿಬ್ಬಂದಿಗಳು ಹೆಲಿಕಾಪ್ಟರ್ ಮತ್ತು ಬೋಟ್ ಮೂಲಕ ರಕ್ಷಣಾಕಾರ್ಯಕೈಗೊಂಡಿದ್ದರು. ಪ್ರವಾಹ ಸಂತ್ರಸ್ತರಿಗೆಅಗತ್ಯವಾಗಿ ಬೇಕಾದ ವಸ್ತುಗಳ ಖರೀದಿಗೆ ತಕ್ಷಣಕ್ಕೆ ತಲಾ 10 ಸಾವಿರ ರೂಪಾಯಿಗಳನ್ನು ಸರ್ಕಾರ ಆದೇಶದಂತೆ ನೀಡಲಾಗುತ್ತಿತ್ತು. ಮಾನ್ಯ ಮುಖ್ಯಮಂತ್ರಿಗಳು ಪ್ರವಾಹದಿಂದ ಜೀವ ಹಾನಿಯಾದವರ ಕುಟುಂಬಕ್ಕೆ ತಲಾ 5 ಲಕ್ಷ ಪರಿಹಾರ ಹಾಗೂ ಸಂಪೂರ್ಣ ನಾಶವಾದ ಮನೆಗಳಿಗೆ 5 ಲಕ್ಷ ಮತ್ತು ಭಾಗಶಃ ಹಾನಿಯಾಗಿರುವ ಮನೆಗಳ ದುರಸ್ಥಿಗೆಂದು 1 ಲಕ್ಷ ಘೋಷಿಸಿದ್ದಾರೆ.[4]

**ಪ್ರವಾಹದ ಪರಿಣಾಮಗಳು**

1. ನೈಸರ್ಗಿಕ ವಿಪತ್ತು ಪ್ರವಾಹದಿಂದಾಗಿ ಬೆಳಗಾವಿ ಜಿಲ್ಲೆಯಲ್ಲಿ ವಿದ್ಯುತ್ ಸ್ಥಗಿತವಾಗಿದ್ದು, ಭಾಗಶಃ ಎಲ್ಲಾ ದೂರವಾಣಿ ಸಂಪರ್ಕಗಳು ಸ್ಥಗಿತವಾಗಿದ್ದವು.
2. ಬೆಳಗಾವಿ ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆ, ರಸ್ತೆ, ಸೇತುವೆಗಳು ಕುಸಿತಗೊಂಡಿದ್ದು ಸಾರಿಗೆಗೆ ತುಂಬಾ ಸಮಸ್ಯೆಯಾಗಿತ್ತು.
3. ಬೆಳಗಾವಿಯ ಜಿಲ್ಲೆಯ ಸಾಕಷ್ಟು ಕೃಷಿ ಭೂಮಿಯು ಕೊಚ್ಚಿ ಹೋಗಿದ್ದು, ಮಣ್ಣಿನ ಫಲವತ್ತತೆ, ಬೆಳೆನಾಶದ ಸಮಸ್ಯೆಗಳು ಉಂಟಾದವು.
4. ಬೆಳಗಾವಿ ಜಿಲ್ಲೆಯಲ್ಲಿ ಕೃಷಿ ಬೆಳೆಯು 5,51,010 ಹೆಕ್ಟೇರ್‌ನಷ್ಟು ನಾಶವಾಯಿತು.
5. 22,734 ಕಿ.ಮೀನಷ್ಟು ರಸ್ತೆ, 1,471 ಸೇತುವೆಗಳು, 6,998 ಪ್ರಾಥಮಿಕ ಶಾಲೆಗಳು, 236 ಪ್ರಾಥಮಿಕ ಆರೋಗ್ಯ ಕೇಂದ್ರಗಳು, 3,789 ಅಂಗನವಾಡಿ ಕೇಂದ್ರಗಳು, ಹಾಗೂ 499 ನೀರಾವರಿ ಟ್ಯಾಂಕ್‌ಗಳು, 24,052 ವಿದ್ಯುತ್ ಕಂಬಗಳು ನಾಶವಾಗಿ ಬಾರೀ ಪ್ರಮಾಣದ ನಷ್ಟವನ್ನುತಂದಿತು.

**ಉಪಸಂಹಾರ**

ಭಾರತದಲ್ಲಿ ನೈಸರ್ಗಿಕ ವಿಪತ್ತುಗಳಿಂದ ಪರಿಸರ ಸಂರಕ್ಷಣೆ ಮಾಡುವುದು ಅತ್ಯಂತ ಮಹತ್ವವಾದ ಪಾತ್ರವಾಗಿದೆ. ಸರ್ಕಾರದ ನೀತಿಗಳು ಮತ್ತು ಅನುಷ್ಠಾನದ ನಡುವಿನ ಅಂತರವನ್ನು ಕಡಿಮೆ

[4] https://ksdma.karnataka.gov.in/storage/pdf-files/FLOOD%20MEMORANDUM%20August%202022_compressed-1-244.pdf

ಮಾಡುವುದರ ಮೂಲಕ ಪರಿಸರ ಸಂರಕ್ಷಣೆಗೆ ನೈಸರ್ಗಿಕ ವಿಕೋಪಗಳ ನಿರ್ವಹಣಾ ಸಂಸ್ಥೆಯ ಪಾತ್ರ ಅತ್ಯಂತ ಮುಖ್ಯವಾದುದು. ಭಾರತ ಸರ್ಕಾರ ಪರಿಸರ ಸಂರಕ್ಷಣೆಗಾಗಿ ಹಲವಾರು ಕಾಯಿದೆ ಮತ್ತು ಯೋಜನೆಗಳನ್ನು ಜಾರಿಗೊಳಿಸಿದ್ದರೂ ಅವು ಜನರಿಗೆ ತಲುಪದೇ ಪರಿಸರ ವಿನಾಶವಾಗುತ್ತಿದೆ. ನೈಸರ್ಗಿಕ ವಿಪತ್ತುಗಳನ್ನು ಕಡಿಮೆ ಮಾಡುವಲ್ಲಿ ಸೂಕ್ತವಾದ ಕಾರ್ಯಕ್ರಮಗಳನ್ನು ಜಾರಿಗೊಳಿಸಬೇಕು. ನೈಸರ್ಗಿಕ ವಿಪತ್ತುಗಳನ್ನು ತಡೆಗಟ್ಟುವಲ್ಲಿ ಸಾಮಾನ್ಯಜನರಿಗೆ ಅರಿವನ್ನು ಮೂಡಿಸುವುದರ ಮೂಲಕ ಭವಿಷ್ಯತ್ತಿನ ಪೀಳಿಗೆಗೆ ಪರಿಸರವನ್ನು ಉಳಿಸುವ ಇವರ ಕಾರ್ಯವೂ ಅತ್ಯಂತ ಶ್ಲಾಘನೀಯವಾದುದು.

**ಪರಾಮರ್ಶನ ಗ್ರಂಥಗಳು**


- *ಬೆಳಗಾವಿ ಜಿಲ್ಲೆಯ ಪರಿಚಯ.* ಕರ್ನಾಟಕ ಸರ್ಕಾರ.
- *ಬೆಳಗಾವಿ ಜಿಲ್ಲೆಯ ನೈಸರ್ಗಿಕ ವಿಕೋಪಗಳ ನಿರ್ವಹಣಾ ಸಂಸ್ಥೆ.* ಕರ್ನಾಟಕ ಸರ್ಕಾರ.
- *ನೈಸರ್ಗಿಕ ವಿಪತ್ತುಗಳ ನಿರ್ವಹಣಾ ಸಂಸ್ಥೆ.* ಭಾರತ ಸರ್ಕಾರ
- *ನೈಸರ್ಗಿಕ ವಿಪತ್ತುಗಳ ನಿರ್ವಹಣಾ ಸಂಸ್ಥೆ.* ಕರ್ನಾಟಕ ಸರ್ಕಾರ
- *ನೈಸರ್ಗಿಕ ವಿಪತ್ತುಗಳ ನಿರ್ವಹಣಾ ಇಲಾಖೆ.* ಕರ್ನಾಟಕ ಸರ್ಕಾರ